ಸಾಮ್ರಾಜ್ಞಿಯಾದ ಮೇಲೆ ಈ ಬಡ ಕೆಳದಿಯನ್ನು ಮರೆಯಬೇಡ ತಿಷಾ' ಎಂದು ಹುಸಿನಗೆಯೊಂದಿಗೆ ಪ್ರಾರ್ಥನೆ ಸಲ್ಲಿಸಿದಾಗ ಎದೆಯೊಳಗೆ ನವಿಲು ನರ್ತಿಸಿದ್ದು ನಿಜ. ಎಷ್ಟೆಂದರೂ ಅದೇ ಆಗ ಅರಳಿ ಬಿರಿಯುತ್ತಿದ್ದ ಷೋಡಶಿಯಲ್ಲವೆ ನಾನು. ನಿಜ ಹೇಳಬೇಕೆಂದರೆ ಷೋಡಶ ವಸಂತಗಳನ್ನೂ ಪೂರೈಸಿರಲಿಲ್ಲ. ವಯೋ ಸಹಜವಾದ ಆಸೆ, ಆಕಾಂಕ್ಷೆಗಳ ಪುಟಿಯುವ ಕಾರಂಜಿ ನಾನಾಗಿದ್ದೆ.

ಸಾಮ್ರಾಟ ಅಶೋಕನ ಕೈ ಹಿಡಿಯುವಾಗಿನ ಉಮೇದು, ಉಲ್ಲಾಸ ಕೈ ಹಿಡಿದ ಮೇಲೆ ಉಳಿಯಲಿಲ್ಲ. ಮಾಮರದ ಚಿಗುರೆಲೆಯಂತಿದ್ದ ಮೃದುವಾದ ನನ್ನ ಅಂಗೈಯನ್ನು ಅರವತ್ತೆಂಟು ವರ್ಷಗಳ ವೃದ್ಧ ಅಶೋಕ ತನ್ನ ಸುಕ್ಕು ಬಿದ್ದ ಕೈಗಳಲ್ಲಿ ಹಿಡಿದು ಅಮುಕಿದಾಗ ಝುರ್ರನೆ ಕುಸಿದು ಹೋಗಿದ್ದೆ. ಪ್ರತಿ ಇರುಳು ನಾನು ನೂರು ನಿರೀಕ್ಷೆಗಳೊಂದಿಗೆ ಶಯ್ಯಾಗೃಹ ಪ್ರವೇಶಿಸುತ್ತಿದ್ದೆ. ಉನ್ಮಾದದ ಉಸಿರಿನ ಸ್ಥಾನವನ್ನು ನಿರಾಶೆಯ ನಿಟ್ಟುಸಿರು ಆವರಿಸಿಕೊಂಡು ಬಿಡುತ್ತಿತ್ತು.

ಅಶೋಕನ ಪ್ರಥಮ ವಿವಾಹ ನಡೆದದ್ದು ಆತನ ಹದಿನೆಂಟನೆಯ ವಯಸ್ಸಿನಲ್ಲಿ. ನನಗಿಂತ ಮುಂಚೆ ಅಶೋಕನ ಕೈ ಹಿಡಿದಿದ್ದ ರಾಣಿಯರಾದ ದೇವಿ, ಕೌರ್ವಕಿ, ಪದ್ಮಾವತಿ, ಅಸಂಧಿಮಿತ್ರಾರ ಮುಖದಲ್ಲಿ ತೃಪ್ತಿಯ ಕಳೆಯಿತ್ತು. ನಾಲ್ವರು ರಾಣಿಯರಲ್ಲದೆ ಅನೇಕ ಲಲನೆಯರ ಸಾಂಗತ್ಯದಲ್ಲಿ ಸಾಮ್ರಾಟನ ಯೌವನ ಸೂರೆಯಾಗಿತ್ತು. ನನ್ನ ಪಾಲಿಗೆ ಇದ್ದದ್ದು ಶುಷ್ಕ, ಕಳಾಹೀನ, ವಾರ್ಧಕ್ಯದಿಂದ ಬಳಲುತ್ತಿದ್ದ ಅಶೋಕ. ಪ್ರತಿನಿತ್ಯ ಮಧುಚಂದ್ರದ ಮಂಚ ಮುಳ್ಳಿನ ಹಾಸಿಗೆಯಾಗತೊಡಗಿತು. ಇಂಥ ವಿರಹೋತ್ಕಟ ಜ್ವರದಲ್ಲಿ ಬೇಯುತ್ತಿರುವಾಗ ತಂಗಾಳಿಯಾಗಿ ನನಗೆ ಕಂಡವ ಕುಣಾಲ. ಹಾಂ! ಹೌದು, ಅವನೇ ಅಶೋಕನ ಮಗ ಕುಣಾಲ!

ತಕ್ಷಶಿಲೆ ರಾಜ್ಯಪಾಲನಾಗಿದ್ದ ಕುಣಾಲ ರಾಜಕಾರ್ಯದ ನಿಮಿತ್ತ ಪಾಟಲಿಪುತ್ರಕ್ಕೆ ಬಂದವನು ತನ್ನನ್ನು ಪ್ರೀತಿಯಿಂದ ಪೊರೆದ ತಾಯಿ ಕೌರ್ವಕಿಯನ್ನು ಕಾಣಲು ಅಂತಃಪುರಕ್ಕೆ ಬಂದಾಗ ಆತನನ್ನು ನಾನು ಮೊದಲ ಬಾರಿ ನೋಡಿದ್ದು. ವಯಸ್ಸಿನಲ್ಲಿ ನನಗಿಂತ ನಾಲ್ಕಾರು ವರ್ಷ ಹಿರಿಯನಿರಬೇಕು, ಅಷ್ಟೇ. ನೋಡಿದ ತಕ್ಷಣ ಕಣ್ಮನಗಳನ್ನು ಸೆರೆ ಸೆಳೆಯುವ ಧೀರ ನಿಲುವು, ಹೇಮವರ್ಣದ ಈ ಕುವರ ಕಣ್ಣಿಗೆ ಕೋಮಲಾಂಗನೆನಿಸಿದರೂ ವಿಶಾಲವಾದ ಎದೆ, ದೃಢವಾದ ಕಾಲುಗಳು, ಬಲಿಷ್ಠ ಬಾಹುಗಳು, ಜವ್ವನದ ಆಮೋದದಿಂದ ಬಿರಿಯುವಂತಿದ್ದ ಆತನ ಪೌರುಷಕ್ಕೆ ಸಾಕ್ಷಿ ನುಡಿಯುತ್ತಿದ್ದವು.

ಅದು ಪ್ರಾತಃಕಾಲದ ಸಮಯ. ಕೌರ್ವಕಿಯ ಜೊತೆಯಲ್ಲಿ ಅಂತಃಪುರದ ಜಾಲಂದ್ರದ ಬಳಿ ನಿಂತಿದ್ದ ಕುಣಾಲನ ಮುಖದ ಮೇಲೆ ಪ್ರಭಾತ ಸೂರ್ಯನ ಕಿರಣಗಳೂ ಬಿದ್ದು ಆ ಮುಖ ವಿಶಿಷ್ಟ ಹೊನ್ನ ಕಾಂತಿಯಿಂದ ಬೆಳಗುತ್ತಿತ್ತು. ಕುತ್ತಿಗೆಯವರೆಗೆ ಇಳಿಬಿದ್ದ ದಟ್ಟ ಕೇಶರಾಶಿ, ತೀಡುವ ಕುಳಿರ್ಗಾಳಿಗೆ ಅಂಕೆತಪ್ಪಿ ಆತನ ವಿಶಾಲ ಹಣೆಯ ಮೇಲೆ ಲಾಸ್ಯವಾಡುತ್ತಿದ್ದ ಮುಂಗುರುಳು, ಇಂದ್ರಧನುಸ್ಸಿನಂತೆ ಬಾಗಿದ ದಟ್ಟಹುಬ್ಬು, ಆ ಹುಬ್ಬಿನ ಕೆಳಗೆ ಲೋಕೋತ್ತರ ಚೆಲುವನ್ನು ಹೊಂದಿದ ಸದಾ ಆರ್ದ್ರವೆನಿಸುವ ಭಾವಪೂರ್ಣ ಕಣ್ಣುಗಳು. ಅಬ್ಬ, ಅಂಥ ಮೋಹಕ ಕಣ್ಣುಗಳನ್ನು ನನ್ನ ಇದುವರೆಗಿನ ಜೀವನದಲ್ಲಿ ಒಮ್ಮೆಯೂ ಕಂಡಿರಲಿಲ್ಲ. ಒಂದೆರಡು ಗಳಿಗೆ ನನ್ನ ಕಣ್ಣುಗಳು ಮೋಡಿಗೊಳಗಾದಂತೆ ಕುಣಾಲನ ಕಣ್ಣುಗಳಲ್ಲಿಯೇ ಕೀಲಿಸಿದ್ದವು. ನಂತರ ಶಂಖಗೊರಳಿನಿಂದ ಇಳಿದು ಆತನ ಹರವಾದ ಎದೆಯಲ್ಲಿ ತಟಸ್ಥವಾದವು. ಎದೆಯ ತಾಳ ತಪ್ಪಿತು. ಕಿಬ್ಬೊಟ್ಟೆಯಲ್ಲಿ ನರುಕಂಪನ. 'ಆತ ವಾವೆಯಲ್ಲಿ ಮಗನಾಗಬೇಕು, ನಿನ್ನ ಭಾವನೆಗಳನ್ನು ನಿಯಂತ್ರಿಸು' ಎಂದು ವಿವೇಕ ಎಚ್ಚರಿಸುತ್ತಿದ್ದರೂ ತಪ್ತ ಲಾವಾರಸದಂತೆ ಕುದಿಯುತ್ತಿದ್ದ ಮನಸ್ಸು ಕೇಳಬೇಕಲ್ಲ! ಆಗಬೇಕಾದುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. 'ಹಕ್ಕಿಯ ಪುಕ್ಕಕ್ಕೆ ಹತ್ತಿಕೊಂಡ ಬೆಂಕಿ ಅದು ಎಲ್ಲಿ ಹಾರಿ ಹೋದರೂ ಬೆನ್ನಂಟಿ ಬರುತ್ತದೆ' ಎಂಬ ಸುಭಾಷಿತ ನೆನಪಾದರೂ ಮನಸ್ಸು ಅದನ್ನು ತುಳಿದು ಕುಣಾಲನೆಡೆಗೆ ಸೆಳೆಯತೊಡಗಿತು. ಕುಣಾಲನ ಕಣ್ಣುಗಳ ಸುಳಿಯಲ್ಲಿ ನನ್ನ ಮನಸ್ಸು ಗಿರ್ರನೆ ಸುತ್ತುತ್ತ ಆಳಕ್ಕೆ, ಆಳದಾಳಕ್ಕೆ, ಪ್ರಪಾತಕ್ಕಿಳಿಯುತ್ತಲೆ ಇತ್ತು. ಇದರ ಪರಿಣಾಮ ಯಾರು ಬಲ್ಲರು; ಭವಿಷ್ಯದ ತಟ್ಟೆಯಲ್ಲಿ ಅಮೃತವಿದೆಯೋ, ಕಾಲಕೂಟ ವಿಷವಿದೆಯೋ ?!